## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 117/2023

ಸಾಕ್ಷಿಗೆ ದಿನಾಂಕ 09-10-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 2 P.W.: 1

| | | |
|---|---|---|
| ಹೆಸರು | ಃ | ಉಜ್ಜಿನಿ ಕೊಟ್ರಪ್ಪ |
| ತಂದೆಯ ಹೆಸರು | ಃ | ಕರಿಯಪ್ಪ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಕಲ್ಲಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಪೋಲೀಸರು ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ, ನಕಾಶೆ ತೆಗೆದಿಲ್ಲ ಮತ್ತು ಯಾವುದೇ ಮುಮಾಲುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಪಂಚನಾಮೆಯಾಗಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಈಗ ಸುಮಾರು 2 ವರ್ಷದ ಹಿಂದೆ ನಾನು ಕಲ್ಲಹಳ್ಳಿ ಗ್ರಾಮದಲ್ಲಿ ಹೊಲದಲ್ಲಿ ಬರುವಾಗ ಪೋಲೀಸರ ಕೋರಿಕೆ ಮೇರೆಗೆ ಸದರಿ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಗೆ ನನ್ನ ಜೊತೆಯಲ್ಲಿ ಚಾಸಾ-3 ರವರು ಸಹಾ ಸಹಿ ಮಾಡಿರುತ್ತಾರೆ. ಸಾಕ್ಷಿಗೆ 2 ಪೋಟೋ ತೋರಿಸಲಾಗಿ ಸಾಕ್ಷಿಯು ಪೋಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಯಾವ ಕಾರಣಕ್ಕಾಗಿ ಸದರಿ ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ30-11-2022 ರಂದು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಘಟನಾ ಸ್ಥಳದಲ್ಲಿ ಪೋಲೀಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಚಾಸಾ-1 ರವರು ಘಟನೆಯ ಬಗ್ಗೆ ವಿವರಿಸಿ ತೋರಿಸಿದ ಸ್ಥಳದಲ್ಲಿ ನಿಪಿ-1 ರಂತೆ ಪಂಚನಾಮೆಯನ್ನು ಜರುಗಿಸಿ ಹಾಗೂ ನಿಪಿ-2 ಮತ್ತು 3 ರಂತೆ

ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ಸ್ಥಳದಲ್ಲಿ ಪೋಲೀಸರು ಚಾಸಾ-1 ರವರು ಹಾಜರುಪಡಿಸಿದ ಒಂದು ಹಿಡಿಗಾತ್ರದ ಕಾಡು ಕಟ್ಟಿಗೆಯನ್ನು ಮತ್ತು ಹಿಡಿಗಾತ್ರದ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ